**ಮೋಟಾರು ವಾಹನ ಅಪಘಾತಗಳ ಪರಿಹಾರ ಮಂಡಳಿ, ಬೆಂಗಳೂರು,**
**1ನೇ ಲಘು ವ್ಯವಹಾರಗಳ ನ್ಯಾಯಾಲಯ ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ ಬೆಂಗಳೂರು**

**ಎಂ.ವಿ.ಸಿ.ಃ 8794/2023**

ಪಿ.ಡಬ್ಲೂ **4**

| | | |
|---|---|---|
| **ಸಾಕ್ಷಿದಾರರ ಹೆಸರು** | **ಃ** | ದೇವೇಂದ್ರ ಕುಮಾರ್ |
| **ತಂದೆಯ ಹೆಸರು** | **ಃ** | ಭೋಜರಾಜ |
| **ವಯಸ್ಸು** | **ಃ** | **43** ವರ್ಷ |
| **ಉದ್ಯೋಗ** | **ಃ** | ವೈದ್ಯರು, ಮಣಿಪಾಲ್ ಆಸ್ಪತ್ರೆ |
| **ವಾಸ ಸ್ಥಳ** | **ಃ** | ಬೆಂಗಳೂರು |

**ದಿನಾಂಕಃ 27.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ನ್ಯಾಯಾಲಯದಿಂದ ಸಮನು ಬಂದ ಕಾರಣ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಮತ್ತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ .

ಮೆಡಿಕಲ್ ಬಿಲ್ಲುಗಳನ್ನು ನಿಪಿ **29** ಎಂದು ಗುರುತಿಸಲಾಯಿತು.

ಮೆಡಿಕಲ್ ಬಿಲ್ಲುಗಳ ಮೊತ್ತವನ್ನು ಯಾವ ರೀತಿಯಲ್ಲಿ ಪಾವತಿ ಮಾಡಿರತ್ತಾರೆ ಎಂದು ದಾಖಲಾತಿಯನ್ನು ಪರಿಶೀಲಿಸಿ ಹೇಳಬೇಕಾಗುತ್ತದೆ. ನಿಪಿ 29 ಗಾಯಾಳುವಿಗೆ ಸಂಬಂಧಪಟ್ಟ ಮೂಲ ಬಿಲ್ಲು ಆಗಿರುತ್ತದೆ.

**ಪಿ.ಡಬ್ಲೂ 4**

**ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ನಿಪಿ 29ರ ಮೂಲ ಬಿಲ್ಲನ್ನು ಅರ್ಜಿದಾರರ ಕುಟುಂಬದವರಿಗೆ ನೀಡಿರುತ್ತೇವೆ. ನಿಪಿ 29 ಮೂಲ ಬಿಲ್ಲಿನ ಮತ್ತೊಂದು ಪ್ರತಿ ಆಗಿರುತ್ತದೆ. ನಿಪಿ 29 ರಲ್ಲಿ ದ್ವಿಪ್ರತಿ ಆಗಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಅರ್ಜಿದಾರರಿಗೆ ಸಂಬಂಧಪಟ್ಟ ಸಮರಿ ಐಪಿ ಬಿಲ್ಲನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 29ರ ಪುಟ ಸಂಖ್ಯೆ 4 ರಲ್ಲಿ ಸಂಬಂಧಪಟ್ಟವರ ಸಹಿ ಇಲ್ಲ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ಮೊಹರು ಹಾಗೂ ಅದಕ್ಕೆ ಸಂಬಂಧಿಸಿದ ಸಹಿ ಮಾತ್ರ ಇದೆ ಎಂದರೆ ಸರಿ. ನಿಪಿ 29 ರ ಮೊಹರಿನ ಬಳಿ ಇರುವ ಸಹಿ ಬಿಜಯ್ ಎಂಬುವವರದ್ದಾಗಿದ್ದು, ಅವರು ಹಿರಿಯ ನಿರ್ವಹಣಾಧಿಕಾರಿ ಆಗಿರುತ್ತಾರೆ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಪಿ 29 ಅನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**